# ನಕ್ಕುಬಿಡಿ

**ಡಾಕ್ಟರ್:** ನಿಮ್ಮ ಗಂಡನ ಕೊರೊನಾ ರಿಪೋರ್ಟ್ ನೆಗೆಟಿವ್ ಬಂದಿದೆ.
**ಹೆಂಡತಿ:** ಅವರ ಬಗ್ಗೆ ಮಾತೇ ಆಡ್ಬೇಡಿ ಡಾಕ್ಟ್ರೆ. ಆ ಮನುಷ್ಯನೇ ನೆಗೆಟಿವ್!

***

**ಹೆಂಡತಿ:** ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ರಿ?
**ಗಂಡ:** ಬಾಸ್ ಜೊತೆ ಊಟಕ್ಕೆ ಹೋಗಿದ್ದೆ.
**ಹೆಂಡತಿ:** ಏನು ತಿಂದ್ಕೊಂಡು ಬಂದ್ರಿ?
**ಗಂಡ:** ಅಯ್ಯೋ ತಿನ್ನೋದು ಎಲ್ಲಿಂದ ಬಂತು... ಬರೀ ಬೈಗುಳ. ಹೆಂಡತಿ ಮೇಲಿನ ಕೋಪನ ನನ್ನ ಮೇಲೆ ತೋರಿಸಿದ್ರು!

***

**ಮಾವ:** ಏನ್ ಅಳಿಯಂದ್ರೆ ಕಾಶಿಗೆ ಹೋಗಿ ನೀವೊಬ್ಬರೇ ವಾಪಸ್ ಬಂದಿದ್ದೀರಿ. ಮಗಳೆಲ್ಲಿ?
**ಗುಂಡ:** ಇಷ್ಟವಾದದ್ದನ್ನು ಕಾಶಿಯಲ್ಲಿ ಬಿಟ್ಟು ಬರಬೇಕು ಅಂತ ನೀವೇ ಅಲ್ವಾ ಮಾವ ಹೇಳಿದ್ದು?

***




**ಮೇಷ್ಟ್ರು:** ಗುಂಡ, ಬಾಬರ್ ಬಾರತದ ಮೇಲೆ ಯಾವಾಗ ದಾಳಿ ಮಾಡಿದ?
**ಗುಂಡ:** ಗೊತ್ತಿಲ್ಲ ಸರ್.
**ಮೇಷ್ಟ್ರು:** ಹೇ ಮೂರ್ಖ. ಬೋರ್ಡ್ ಮೇಲೆ ಬರೆದಿಲ್ವಾ, ಅದನ್ನು ಓದಿ ಹೇಳೋಕೆ ಆಗಲ್ವಾ?
**ಗುಂಡ:** ಅದು ಅವನ ಫೋನ್ ನಂಬರ್ ಅಂದ್ಕೊಂಡೆ.

***

**ಎಸಿಬಿ ಆಫೀಸರ್:** ನಿಮ್ಮ ಆಫೀಸ್‌ನಲ್ಲಿ ಯಾರ್‍ಯಾರು ಲಂಚ ತಗೋತಾರೆ?
**ಗುಂಡ:** ಹೇಳಿದ್ರೆ ನಂಗೆಷ್ಟು ಕೊಡ್ತೀರಾ?

***

**ಗುಂಡ:** ನಿನ್ನೆ ನಿನ್ನನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿದ್ರಂತೆ, ಹೌದಾ? ಅಂಥದ್ದು ಏನಾಗಿತ್ತು ನಿಂಗೆ?
**ಬಸವ:** ಏನೂ ಆಗಿರಲಿಲ್ಲ. ನನ್ನ ಫೋನ್ ನೆಟ್ ಬ್ಯಾಲೆನ್ಸ್ ಮುಗಿದಿತ್ತು. ಅದಕ್ಕೆ ರಾತ್ರಿ ಎಂಟಕ್ಕೆಲ್ಲ ಮಲ್ಕೊಂಡ್ ಚೆನ್ನಾಗಿ ನಿದ್ದೆ ಮಾಡ್ಬಿಟ್ಟೆ. ಅದರಿಂದ ಗಾಬರಿಗೊಂಡ ಮನೆಯವರು ಆರೋಗ್ಯ ಕೆಟ್ಟಿದೆ ಅಂತ ಅಂದ್ಕೊಂಡು ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ರು.

***

**ಬಾಸ್:** ಎಲ್ಲಿಗೆ ಹೋಗಿದ್ದೆ?
**ಸುಬ್ಬ:** ಕಟಿಂಗ್ ಶಾಪ್‌ಗೆ.
**ಬಾಸ್:** ಆಫೀಸ್ ಟೈಮ್‌ನಲ್ಲಾ?
**ಸುಬ್ಬ:** ಕೂದಲು ಬೆಳೆದಿದ್ದು ಆಫೀಸ್ ಟೈಮ್‌ನಲ್ಲೇ ಅಲ್ವಾ, ಅದಕ್ಕೆ ಹೋಗಿದ್ದೆ.
**ಬಾಸ್:** ಮನೆಯಲ್ಲಿ ಇದ್ದಾಗ್ಲೂ ಕೂದಲು ಬೆಳೆಯುತ್ತದೆ ಅಲ್ವಾ?
**ಸುಬ್ಬ:** ನಾನೇನು ಬೊಡು ಮಾಡಿಸಿಕೊಂಡಿಲ್ಲ. ಆಫೀಸ್ ಟೈಮ್ಲ್ಲಿ ಎಷ್ಟು ಬೆಳೆದಿತ್ತೊ ಅಷ್ಟು ಕೂದಲನ್ನು ಮಾತ್ರ ಕಟ್ ಮಾಡಿಸಿದ್ದೇನೆ. ಮನೆಗ್ ಹೋದ ಮೇಲೆ ಮಿಕ್ಕ ಕೂದಲನ್ನೂ ಕಟ್ ಮಾಡಿಸುತ್ತೇನೆ!

***

**ಅಪ್ಪ:** ಮಗಳೇ ನಿನಗೆ ಯಾವ ತರದ ಗಂಡು ಬೇಕು?
**ಮಗಳು:** ನನ್ನ ಗಂಡನಾಗುವವನಿಗೆ ತುಂಬಾ ತಾಳ್ಮೆ ಇರಬೇಕು ಅಂತಹ ಗಂಡು ಬೇಕು ಅಪ್ಪ.
**ಅಪ್ಪ:** ಹಾಗಾದ್ರೆ ಆರ್‌ಸಿಬಿ ಫ್ಯಾನ್ ಆಗಿರುವ ಗಂಡು ಒಕೆನಾ?

***

**ತಿಮ್ಮ:** ಲವ್ ಮ್ಯಾರೇಜ್ ಒಳ್ಳೆಯದೋ? ಅರೇಂಜ್ ಮ್ಯಾರೇಜ್ ಒಳ್ಳೆಯದೋ?
**ಗುಂಡ:** ಮದುವೆಯಾಗುವುದು ಒಳ್ಳೆಯದು ಅಂತ ಯಾರು ಹೇಳಿದ್ದು?

***

**ಹೆಂಡತಿ:** ರೀ... ಈ ರೊಬೋಟ್ ನಾನು ಹೇಳಿದ ಹಾಗೆ ಕೆಲಸ ಮಾಡ್ತಿಲ್ಲ.
**ಗಂಡ:** ಅದು ರೊಬೋಟ್ ಕಣೆ, ನಾನಲ್ಲ!

***

**ಡಾಕ್ಟರ್:** ಈ ಟಾನಿಕ್ ಅನ್ನು ದಿನಕ್ಕೆ ನಾಲ್ಕು ಸ್ಪೂನ್ ತಗೊಳ್ಳಿ.
**ಕಲ್ಲೇಶಿ:** ಡಾಕ್ಟ್ರೆ ನಮ್ಮ ಮನೆಯಲ್ಲಿ ಒಂದೇ ಸ್ಪೂನ್ ಇರೋದು. ಏನ್ ಮಾಡ್ಲಿ?
**ಡಾಕ್ಟರ್:** ಬಾಕಿ ಮೂರ್ ಸ್ಪೂನ್ ಖರೀದಿ ಮಾಡು.

***

**ಕಿಡ್ನಾಪರ್:** ನಿನ್ನ ಹೆಂಡತಿಯನ್ನು ಕಿಡ್ನಾಪ್ ಮಾಡಿದ್ದೀನಿ. ಸಾಕ್ಷಿಗೆ ನಿನ್ನ ಹೆಂಡತಿಯ ಬೆರಳು ಕತ್ತರಿಸಿ ಕಳುಹಿಸ್ತೀನಿ ನೋಡ್ತಿಯಾ?
**ತಿಮ್ಮ:** ಹೇ ಇಲ್ಲಪ್ಪ. ಬೆರಳು ಕಳುಹಿಸಿದ್ರೆ ನನಗೆ ಗುರುತು ಸಿಗಲ್ಲ. ಅದಕ್ಕೆ ತಲೆ ಕಟ್ ಮಾಡಿ ಕಳ್ಸು!

ಸಂಗ್ರಹ: ಶರದ ಕುಲಕರ್ಣಿ, ಬೀದರ್

